ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಮಂಡ್ಯ ನಗರದಲ್ಲಿರುವ ಕೊಳಚೆ ಪ್ರದೇಶಗಳ ಅಭಿವೃದ್ಧಿ

110 (520) : ಶ್ರೀ ಆತ್ಮಾನಂದ ಎಂ.ಎಸ್ (ಮಂಡ್ಯ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯ ನಗರದಲ್ಲಿರುವ ಘೋಷಿತ ಕೊಳಚೆ ಪ್ರದೇಶಗಳು ಯಾವುವು

ಆ) ಈ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಕಾಮಗಾರಿಯನ್ನು ಕೈಗೊಳ್ಳಲಾಗಿದೆಯೇ;

ಇ) ಹಾಗಿದ್ದಲ್ಲಿ ಕಾಮಗಾರಿಯ ವಿವರಗಳೇನು (ಪ್ರತ್ಯೇಕ ಕೊಳಚೆ ಪ್ರದೇಶಕ್ಕೆ ಅನ್ವಯ ಆಗುವಂತೆ)

ಈ) ಈ ಕಾಮಗಾರಿಗಳು ಯಾವ ಹಂತದಲ್ಲಿದೆ?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು) :

ಅ) ಮಂಡ್ಯ ನಗರದಲ್ಲಿ ಮಂಡಳಿಯ ಕಾರ್ಯಾಯಿಡಿ ಘೋಷಿತಗೊಂಡ ಒಟ್ಟು 23 ಕೊಳಚೆ ಪ್ರದೇಶಗಳಿದ್ದು, ವಿವರಗಳನ್ನು ಅನುಬಂಧ "ಅ" ನಲ್ಲಿ ನೀಡಲಾಗಿದೆ.

ಆ) ಹೌದು

ಈ ಕೆಳಕಂಡ ಅಭಿವೃದ್ಧಿ ಕಾರ್ಯಾಯಿಡಿಗಳನ್ನು ಘೋಷಿತ ಕೊಳಚೆ ಪ್ರದೇಶಗಳಲ್ಲಿ ಕೈಗೊಳ್ಳಲಾಗಿದೆ.

1. ಮೂಲಭೂತ ಸೌಕರ್ಯ ಯೋಜನೆ
2. ನಿರ್ಮಲಜ್ಯೋತಿ ಯೋಜನೆ
3. ಹುಡ್ಕೋ ವಸತಿ ಯೋಜನೆ
4. ವಾಂಬೇ ವಸತಿ ಯೋಜನೆ
5. ವಿಶೇಷ ಘಟಕ ಯೋಜನೆ
6. ನಗರ ಆಶ್ರಯ ಯೋಜನೆ
7. ನಿರ್ಮಲಭಾರತ್ ಅಭಿಯಾನ್ ಯೋಜನೆ
8. ಎ.ಡಿ.ಬಿ. ಯೋಜನೆಗಳ ಅಡಿಯಲ್ಲಿ

ಇ) 1979-90 ನೇ ಸಾಲಿನಿಂದ 2002-2003 ನೇ ಸಾಲಿನವರೆಗೆ ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ, ಶೌಚಾಲಯ, ನೆಲಹಾಸು, ಒಳಚರಂಡಿ, ಬೀದಿದೀಪ ಇತ್ಯಾದಿ ಸೌಲಭ್ಯಗಳನ್ನು ರೂ. 111.63 ಲಕ್ಷಗಳ ಅಂದಾಜು ವೆಚ್ಚದಲ್ಲಿ ಒದಗಿಸಲಾಗಿದೆ.

2002-03 ನೇ ಸಾಲಿನಲ್ಲಿ ನಿರ್ಮಲಜ್ಯೋತಿ ಯೋಜನೆಯಡಿ ಮೊದಲನೇ ವರ್ಷದಲ್ಲಿ 7 ಕೊಳಚೆ ಪ್ರದೇಶಗಳಲ್ಲಿ ರಸ್ತೆ, ಅಡ್ಡಮೋರಿ, ನೆಲಹಾಸು, ಚರಂಡಿ, ನೀರು ಸರಬರಾಜು, ಒಳಚರಂಡಿ ಮತ್ತು ವಿದ್ಯುದ್ದೀಕರಣ ಕಾಮಗಾರಿಗಳನ್ನು ರೂ. 267.57 ಲಕ್ಷ ಅಂದಾಜಿನಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದ್ದು, ಈವರೆಗೆ 153.23 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. ಈ ಕಾಮಗಾರಿಗಳನ್ನು 2004 ರ ಫೆಬ್ರವರಿ ಮಾಹೆಯ ಅಂತ್ಯದಲ್ಲಿ ಪೂರ್ಣಗೊಳಿಸಲಾಗುವುದು.

1983-84ನೇ ಸಾಲಿನಿಂದ 2002-03 ನೇ ಸಾಲಿನವರೆಗೆ ವಿವಿಧ ವಸತಿ ಯೋಜನೆಗಳಡಿ 1631 ಮನೆಗಳನ್ನು 547.41 ಲಕ್ಷ ರೂ.ಗಳ ಅಂದಾಜಿನಲ್ಲಿ ನಿರ್ಮಿಸಿ (ತಮಿಳಿಯನ್ ಕಾಲೋನಿ 146

ಮನೆಗಳು ಪೂರ್ಣಗೊಂಡಿದ್ದು ಮತ್ತು ವೇಣುಗೋಪಾಲ ಶಿಶು ವಿಹಾರದ 20 ಮನೆಗಳ ಮೇಲ್ಚಾವಣಿ ಕೆಲಸ ಪೂರ್ಣಗೊಂಡಿರುವುದನ್ನು ಹೊರತುಪಡಿಸಿ) ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ. 2001–02ನೇ ಸಾಲಿನ ನಿರ್ಮಲ ಭಾರತ್ ಅಭಿಯಾನ್ ಯೋಜನೆಯಡಿ 10 ಸೀಟರ್ಸ್ ನ 6 ಸಂಖ್ಯೆ ಸಾಮೂಹಿಕ ಶೌಚಾಲಯಗಳನ್ನು ರೂ. 24.00 ಲಕ್ಷ ಅಂದಾಜಿನಲ್ಲಿ ನಿರ್ಮಿಸಿ ಕೊಳಚೆ ನಿವಾಸಿಗಳ ಉಪಯೋಗಕ್ಕೆ ನೀಡಲಾಗಿದೆ.

ಎ.ಡಿ.ಬಿ. ಯೋಜನೆಯಡಿ ಆಯ್ದ 13 ಕೊಳಚೆ ಪ್ರದೇಶಗಳಲ್ಲಿ 182.23 ಲಕ್ಷ ರೂ.ಗಳ ಅಂದಾಜಿನಲ್ಲಿ ಯು.ಜಿ.ಸಿ., ಚರಂಡಿ, ಚಪ್ಪಡಿ ನೆಲಹಾಸು, ಜಲ್ಲಿ ರಸ್ತೆ, ನೀರು ಸರಬರಾಜು, ಬೀದಿದೀಪ. ಕಸದ ತೊಟ್ಟಿ ಅಡ್ಡಮೋರಿ, ಸಮುದಾಯಭವನ, ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದ್ದು ಡಿಸೆಂಬರ್ 2003 ಅಂತ್ಯದವರೆಗೆ ರೂ. 65.65 ಲಕ್ಷ ರೂ.ಗಳ ಪ್ರಗತಿ ಸಾಧಿಸಲಾಗಿದೆ. ಕಾಮಗಾರಿಗಳ ವಿವರಗಳನ್ನು ಅನುಬಂಧ 'ಆ' ಯಿಂದ 'ಈ' ವರೆವಿಗೆ ನೀಡಲಾಗಿದೆ.

ಈ) ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುವ ನಿರ್ಮಲಜ್ಯೋತಿ ಮತ್ತು ಎ.ಡಿ.ಬಿ. ಯೋಜನೆಯಡಿಯ ಕಾಮಗಾರಿಗಳನ್ನು 2004 ರ ಮಾರ್ಚ್ ಮಾಹೆಯಲ್ಲಿ ಪೂರ್ಣಗೊಳಿಸಲಾಗುವುದು.

ಅನುಬಂಧ –ಅ

ಮಂಡ್ಯ ನಗರ ವ್ಯಾಪ್ತಿಯಲ್ಲಿರುವ ಕೊಳಚೆ ಪ್ರದೇಶಗಳ ವಿವರ

ಕ್ರ.ಸಂಖ್ಯೆ	ಜಿಲ್ಲೆ	ನಗರ	ಕೊಳಚೆ ಪ್ರದೇಶದ ಹೆಸರು
1	2	3	4
1.	ಮಂಡ್ಯ	ಮಂಡ್ಯ	ಕಾಳಮ್ಮ ದೇವಸ್ಥನದ ಹತ್ತಿರದ ಕೊಳಚೆ ಪ್ರದೇಶ
2.			ನಂದಾ ಟಾಕೀಸ್ ಹಿಂಭಾಗದ ಕೊ.ಪ್ರ.
3.			ತಮಿಳಿಯನ್ಸ್ ಕಾಲೋನಿ (ಪಶ್ಚಿಮ)
4.			ಸ.ನಂ. 62 ಸಕ್ಕರೆ ಕಾರ್ಖಾನೆ ಕೊ.ಪ್ರ.
5.			ಸ್ವಾತಂತ್ರ ಪಾಳ್ಯ ಕೊಳಚೆ ಪ್ರದೇಶ
6.			ಆಲಹಳ್ಳಿ ಟ್ಯಾಂಕ್ ಬೆಡ್
7.			ಸಿಹಿನೀರಿನ ಕೊಳ
8.			ಗುತ್ತಲು ಹರಿಜನ ಕಾಲೋನಿ
9.			ನಲಬಂದವಾಡಿ
10.			ಸ್ಲಾಟರ್ ಹೌಸ್
11.			ಮಂಡ್ಯಟ್ಯಾಂಕ್ ಬೆಡ್ ಕೊಳಚೆ ಪ್ರದೇಶ
12.			ಹೊಸಹಳ್ಳಿ ಗುರುಮಠ್
13.			ಗಿರಿಜಾ ಟಾಕೀಸ್ ಮುಂಭಾಗದ ಕೊ.ಪ್ರ
14.			ಡೌರಿ ಸಮಾಜ
15.			ಕುರುಬರ ಹಾಸ್ಟೆಲ್ ಹಿಂಭಾಗದ ಕೊಳಚೆ ಪ್ರದೇಶ

1	2	3	4
16.			ಜಯರಾಮ್ ಲೇ ಔಟ್ ಕೊಳಚೆ ಪ್ರದೇಶ
17.			RAPCMS ಹತ್ತಿರದ ಕೊಳಚೆ ಪ್ರದೇಶ
18.			ಸೆಂಟ್ ಜೋಸೆಫ್ ಮತ್ತು ಬೀರನ ಹಳ್ಳಿ
19.			ಹೊಸ ತಮಿಳಿಯನ್ಸ್ ಕಾಲೋನಿ
20.			ಕಲ್ಲಹಳ್ಳಿ ಮುಸ್ಲಿಂ ಬ್ಲಾಕ್
21.			ಅಂಗವಿಕಲರ ಕಾಲೋನಿ
22.			ವೇಣುಗೋಪಾಲ ಶಿಶುವಿಹಾರ
23.			ಪೌರಕಾರ್ಮಿಕರ ಕಾಲೋನಿ

ಅನುಬಂಧ -- ಆ

ನಿರ್ಮಲ ಜ್ಯೋತಿ ಯೋಜನೆಯಡಿ 2002-03 ನೇ ಸಾಲಿನಲ್ಲಿ ಕೈಗೊಳ್ಳಲಾಗಿರುವ ಕಾಮಗಾರಿಗಳ ವಿವರ

ಕ್ರಮ ಸಂಖ್ಯೆ	ಕೊಳಚೆ ಪ್ರದೇಶದ ಹೆಸರು	ಕಾಮಗಾರಿಯ ವಿವರ	ಅಂದಾಜು ಪಟ್ಟಿಯಲ್ಲಿ ನಿಗಧಿಪಡಿಸಿರುವ ಹಣ (ಲಕ್ಷ ರೂ.ಗಳಲ್ಲಿ)
1.	ಶ್ರೀನಿವಾಸಪುರ	ನೆಲಹಾಸು, ಚರಂಡಿ, ಒಳಚರಂಡಿ, ನೀರು ಸರಬರಾಜು, ಅಡಿಗಾಲುವೆ, ತಡೆಗೋಡೆ, ಹೊರ ವಿದ್ಯುದ್ದೀಕರಣ	56.97
2.	ಸಾತನೂರು	ಚರಂಡಿ, ಒಳಚರಂಡಿ ನೀರು ಸರಬರಾಜು ಅಡಿಗಾಲುವೆ, ಹೊರ ವಿದ್ಯುದ್ದೀಕರಣ	31.68
3.	ಹಳೆ ತಮಿಳಿಯನ್ ಕಾಲೋನಿ	ಚರಂಡಿ, ಒಳಚರಂಡಿ, ನೀರು ಸರಬರಾಜು ತಡೆಗೋಡೆ ಹೊರ ವಿದ್ಯುದ್ದೀಕರಣ	28.87
4.	ಹೊಸ ತಮಿಳಿಯನ್ ಕಾಲೋನಿ	ಅಡಿಗಾಲುವೆ, ಚರಂಡಿ, ಒಳಚರಂಡಿ, ನೀರು ಸರಬರಾಜು, ತಡೆಗೋಡೆ, ಹೊರ ವಿದ್ಯುದ್ದೀಕರಣ	40.14
5.	ಡವರಿ ಸಮಾಜ	ಅಡಿಗಾಲುವೆ, ಚರಂಡಿ, ಒಳಚರಂಡಿ, ನೀರು ಸರಬರಾಜು, ತಡೆಗೋಡೆ, ಹೊರ ವಿದ್ಯುದ್ದೀಕರಣ	25.06
6.	ಅಲಹಳ್ಳಿ ಮುಸ್ಲಿಂ ಬ್ಲಾಕ್	ಚರಂಡಿ, ಒಳಚರಂಡಿ, ನೀರು ಸರಬರಾಜು	22.32
7.	ಅಲಹಳ್ಳಿ ಬಡಾವಣೆ	ಅಡಿಗಾಲುವೆ, ಚರಂಡಿ	29.08
8.	ಕುರುಬರ ಹಾಸ್ಟೆಲ್ ಹಿಂಭಾಗ	ರಸ್ತೆ, ಅಡ್ಡಮೋರಿ, ಚರಂಡಿ, ಒಳಚರಂಡಿ	21.37
9.	ಟ್ಯಾಂಕ್ ಬಂಡ್	ರಸ್ತೆ ಅಡ್ಡಮೋರಿ, ಚರಂಡಿ, ಒಳಚರಂಡಿ, ನೀರು ಸರಬರಾಜು, ಹೊರ ವಿದ್ಯುದ್ದೀಕರಣ	21.08
	ಒಟ್ಟು		276.57

ಅನುಬಂಧ – ಇ

ವಸತಿ ಯೋಜನೆಯ ವಿವರ

ಕ್ರಮ ಸಂಖ್ಯೆ	ವರ್ಷ	ಕೊಳಚೆ ಪ್ರದೇಶದ ಹೆಸರು ಹುಡ್ಕೋ ವಸತಿ ಯೋಜನೆ ವಿವರ	ನಿರ್ಮಿಸಿರುವ ಮನೆಗಳ ಸಂಖ್ಯೆ	ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ)
1.	1983–84	ಆಲಹಳ್ಳಿ, ಮಂಡ್ಯ	720	134.00
2.	1993–94	ಗಿರಿಜ ಟಾಕೀಸ್	113	29.25
3.	1996–97	ಡವರಿ ಸಮಾಜ ಹಂತ–1	48	29.80
4.	1996–97	ಡವರಿ ಸಮಾಜ ಹಂತ–2	48	29.80
5.	1996–97	ಡವರಿ ಸಮಾಜ ಹಂತ – 3	43	26.70
6.	1996–97	ಡವರಿ ಸಮಾಜ ಹಂತ – 4	21	13.50
7.	2000–01	ಡವರಿ ಸಮಾಜ	80	57.96
		ಒಟ್ಟು	1073	321.01
	ವಿಶೇಷ ಘಟಕ ಯೋಜನೆ–ಪುನರ ವಸತಿ ಯೋಜನೆ			
8.		ಶ್ರೀನಿವಾಸಪುರ	292	102.20
		ಒಟ್ಟು	292	102.20
	ನಗರ ಆಶ್ರಯ ಯೋಜನೆ			
9.		ಸ್ಲಾಟರ್ ಹೌಸ್	40	14.00
10.		ಮುಸ್ಲಿಂ ಬ್ಲಾಕ್	60	21.00
		ಒಟ್ಟು	100	35.00
	ವಾಂಬೇ ಯೋಜನೆ			
11.	2001–02	ತಮಿಳಿಯನ್ ಕಾಲೋನಿ	146	57.20
12.	2002–03	ವೇಣುಗೋಪಾಲ ಶಿಶು ವಿಹಾರ	20	8.00
		ಒಟ್ಟು	166	65.20

ನಿರ್ಮಲ ಭಾರತ್ ಅಭಿಯಾನ ಯೋಜನೆ (ಸಾಮೂಹಿಕ ಶೌಚಾಲಯ–10 ಸೀಟರ್ಸ್)

ಕ್ರಮ ಸಂಖ್ಯೆ	ವರ್ಷ	ಕೊಳಚೆ ಪ್ರದೇಶದ ಹೆಸರು	ನಿರ್ಮಿಸಿರುವ ಶೌಚಾಲಯಗಳ ಸಂಖ್ಯೆ	ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ)
13.	2001–02	ತಮಿಳಿಯನ್ ಕಾಲೋನಿ	2	8
14.	2001–02	ಆಲಹಳ್ಳಿ	4	16.00
		ಒಟ್ಟು	6	24.00

ಅನುಬಂಧ–ಈ

ಎ.ಡಿ.ಬಿ. ಯೋಜನೆಯಡಿ ಅಭಿವೃದ್ಧಿ ಕಾಮಗಾರಿಗಳು

ಕ್ರಮ ಸಂಖ್ಯೆ	ಕೊಳಚೆ ಪ್ರದೇಶದ ಹೆಸರು	ಕಾಮಗಾರಿಗಳ ವಿವರ	ಅಂದಾಜು ಮೊತ್ತ	ವಿರ್ಚಾದ ಹಣ
1.	ಕಲ್ಲಹಳ್ಳಿ ಮುಸ್ಲಿಂ ಬ್ಲಾಕ್		20.30	8.70
2.	ಆರ್.ಎ.ಪಿ.ಸಿ.ಎಂ.ಎಸ್. (ಶಂಕರ ಮಠ)		20.40	7.55

1	2	3	4	5
3.	ಸ್ಲಾಟರ್ ಹೌಸ್		11.80	7.50
4.	ಸಿಹಿ ನೀರು ಕೊಳ		5.30	2.40
5.	ನಳಬಂಧವಾಡಿ		15.20	1.90
6.	ಸರ್ವೆ 620 ಶುಗರ್ ಟೌನ್		30.60	16.00
7.	ಪೂರ್ವ ಭಾಗದ ರೈಲ್ವೆ ಗೇಟ್ ಹತ್ತಿರ	ಯು.ಜಿ.ಡಿ., ಚರಂಡಿ, ಚಪ್ಪಡಿ	9.50	10.80
8.	ವೇಣು ಗೋಪಾಲ ಶಿಶು ವಿಹಾರ	ನೆಲಹಾಸು, ಜಲ್ಲಿ ರಸ್ತೆ, ನೀರು	6.40	0.00
9.	ಗುತ್ತಲು ಹರಿಜನ ಕಾಲೋನಿ	ಸರಬರಾಜು, ಬೀದಿದೀಪ ಕಸದ	31.00	6.30
10.	ಪಿ.ಕೆ. ಕಾಲೋನಿ	ತೊಟ್ಟಿ, ಅಡ್ಡಮೋರಿ, ಸಮುದಾಯ	6.80	0.00
11.	ಸ್ವತಂತ್ರ ಪಾಳ್ಯ	ಭವನ	10.90	1.00
12.	ಜಯರಾಮ್ ಲೇಔಟ್		5.50	1.90
13.	ಹೊಸಹಳ್ಳಿ ಗುರುಮಠ		8.53	1.60
	ಒಟ್ಟು		182.23	65.65

ಸೇಡಂ ನಗರದ ಪದವಿ ಮಹಾವಿದ್ಯಾಲಯಕ್ಕೆ ಪೀಠೋಪಕರಣಗಳ ವ್ಯವಸ್ಥೆ

114 (497) : ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ, (ಸೇಡಂ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲಬರ್ಗ ಜಿಲ್ಲೆಯ ಸೇಡಂ ನಗರದ ಪದವಿ ಮಹಾವಿದ್ಯಾಲಯದ ಪೀಠೋಪಕರಣಗಳಿಗಾಗಿ ಏನಾದರೂ ಹಣ ಸರ್ಕಾರದ ವತಿಯಿಂದ ಮಂಜೂರಾಗಿದೆಯೇ;

ಆ) ಮಂಜೂರಾಗದಿದ್ದಲ್ಲಿ ಈ ಪೀಠೋಪಕರಣಗಳನ್ನು ತರಿಸಲಾಗಿದೆಯೇ; ಇಲ್ಲವೆಂದರೆ ವಿವರ ನೀಡುವುದು?

ಡಾ॥ ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :

ಅ) ಆಗಿದೆ.

ಆ) ರೂ. 15000/– ಗಳನ್ನು ತರಗತಿ ಪೀಠೋಪಕರಣ ಖರೀದಿಗಾಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸೇಡಂಗೆ ಅನುದಾನ ಬಿಡುಗಡೆ ಮಾಡಲಾಗಿದ್ದು, ಸದರಿ ಕಾಲೇಜಿನ ಪ್ರಾಂಶುಪಾಲರು ಈ ಅನುದಾನದಲ್ಲಿ ತರಗತಿ ಪೀಠೋಪಕರಣಗಳನ್ನು ಖರೀದಿಸಿರುತ್ತಾರೆ.

ಕಲಾವಿದರಿಗೆ ಮಾಶಾಸನ ನೀಡಿಕೆ

116 (500) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರ ಕಲಾವಿದರಿಗೆ ಮಾಸಾಶನ ನೀಡುತ್ತಿರುವುದು ನಿಜವೇ; ಪ್ರತಿ ಕಲಾವಿದರಿಗೆ ನೀಡುತ್ತಿರುವ ಮಾಸಾಶನ ಎಷ್ಟು;

ಆ) ಎಷ್ಟು ಜನ ಕಲಾವಿದರಿಗೆ ಮಾಸಾಶನ ನೀಡಲಾಗುತ್ತಿದೆ;

ಇ) ಮಾಸಾಶನ ಹೆಚ್ಚಳ ಮಾಡುವ ವಿಚಾರ ಸರ್ಕಾರದ ಮುಂದೆ ಇದೆಯೇ; ಎಷ್ಟು ಹೆಚ್ಚಳ ಮಾಡಲಾಗುವುದು; ಯಾವಾಗಿನಿಂದ ಅನ್ವಯಿಸುವಂತೆ ಹೆಚ್ಚಳ ಮಾಡಲಾಗುವುದು?